1	2	3	4	5
2.	ಸಂತೇಮರಳ್ಳಿ (ಸಂತೇಮಾರಹಳ್ಳಿ, ಚಂದಕವಾಡಿ ಹೋಬಳಿ)	20777	9822	10955
3.	ಗುಂಡ್ಲುಪೇಟೆ	39871	16623	23248
4.	ಕೊಳ್ಳೇಗಾಲ:			
	ಕೊಳ್ಳೇಗಾಲ (ಭಾಗಶಃ)	14153	8852	5301
	ಯಳಂದೂರು ತಾಲ್ಲೂಕು	11230	6315	4915
	ಒಟ್ಟು	**25383**	**15167**	**10216**
5.	ಹನೂರು	37271	19154	18117
	ಒಟ್ಟು	**161398**	**79942**	**81456**

ಕೃಷಿ ಸಾಲಕ್ಕೆ ಸ್ಟ್ಯಾಂಪ್ ಶುಲ್ಕ ಕಡ್ಡಾಯಗೊಳಿಸಿರುವುದು

3182 (3672) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ಯಾಂಕ್ ಸಾಲಗಳಿಗೆ ಸ್ಟ್ಯಾಂಪ್ ಶುಲ್ಕ ಕಡ್ಡಾಯಗೊಳಿಸಿರುವುದರಿಂದ ರೈತರು ತೊಂದರೆಗಳಿಗೆ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) 2007ನೇ ಜೂನ್ ವರೆಗೆ ಸ್ಟ್ಯಾಂಪ್ ಶುಲ್ಕವನ್ನು ಕೃಷಿ ಸಾಲಗಳಿಗೆ ದಾಖಲೆಗಳಿಗೆ ಮನ್ನಾ ಮಾಡಿದ್ದು, ಈಗ ಸರ್ಕಾರ ಈ ಬಗ್ಗೆ ರೈತರಿಗೆ ಮಾಹಿತಿ ನೀಡದೇ ದಿಢೀರನೇ ಕಾಯಿದೆಯನ್ನು ತಿದ್ದುಪಡಿ ಮಾಡಿ ಕೃಷಿ ಸಾಲ, ಚಿನ್ನಗಳ ಅಡವಿಗಾಗಿ ಸ್ಟ್ಯಾಂಪ್ ಶುಲ್ಕ ಕಡ್ಡಾಯ ಮಾಡಿರುವುದರ ಔಚಿತ್ಯವೇನು:

ಇ) ಸ್ಟೇಟ್ ಬ್ಯಾಂಕ್ ಇಲ್ಲದ ಕಡೆ ಸ್ಟ್ಯಾಂಪ್ ಶುಲ್ಕ ತೆರಲು ರೈತರು ಪರದಾಡುವಂತಾಗಿದೆ. ಈಗ ತಿದ್ದುಪಡಿ ಮಾಡಿದ ಕಾಯಿದೆಯನ್ನು ರದ್ದು ಮಾಡಿ ಮೊದಲಿನಂತೆ ರೈತರಿಗೆ ಅನುಕೂಲ ಮಾಡಿಕೊಡುವುದೇ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) ಮುದ್ರಾಂಕ ಶುಲ್ಕವನ್ನು ಗಣನೀಯವಾಗಿ ಕಡಿಮೆ ಮಾಡಿರುವುದರಿಂದ ತೊಂದರೆ ಆಗಿರುವುದಿಲ್ಲ.

ಆ) ಮುದ್ರಾಂಕ ಶುಲ್ಕವನ್ನು ದಿನಾಂಕ: 1.4.2003 ರಿಂದ ಗಣನೀಯವಾಗಿ ಕಡಿಮೆ ಮಾಡಲಾಗಿದೆ. ರೈತರು ಪಡೆಯುವ ಕೃಷಿ ಸಾಲಗಳಿಗೆ ಆಧಾರ ಪತ್ರಗಳಿಗೆ ಈ ಹಿಂದೆ ಇದ್ದ ಹೆಚ್ಚಿಗೆ ದರವನ್ನು ಕಡಿಮೆಗೊಳಿಸಿದೆ. ಪ್ರಸ್ತುತ 1000/– ರೂ.ಗಳ ಸಾಲಕ್ಕೆ ಕೇವಲ 5/– ರೂಪಾಯಿಗಳ ಮುದ್ರಾಂಕ ಶುಲ್ಕ ನಿಗದಿಪಡಿಸಿದೆ.

ಇ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆಗಳು ಇಲ್ಲದ ಕಡೆ ಉಪ ನೋಂದಣಿ ಕಛೇರಿಯಲ್ಲಿ ನಗದಾಗಿ/ ಡಿ.ಡಿ./ಪೇ ಆರ್ಡರ್/ ಬ್ಯಾಂಕರ್ಸ್ ಚೆಕ್ ಮೂಲಕ ಮುದ್ರಾಂಕ ಶುಲ್ಕ ಪಾವತಿಸಲು ಅವಕಾಶ ಮಾಡಲಾಗಿದೆ.

ಅಂಗನವಾಡಿ ಸಹಾಯಕಿಯರು ಕಾರ್ಯಕರ್ತೆ ಹುದ್ದೆ ಕೋರಿ ಅರ್ಜಿ ಸಲ್ಲಿಸಿರುವುದು

3183 (3673) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರ ಖಾಲಿ ಹುದ್ದೆ ಕೋರಿ ಸಹಾಯಕಿಯರು ಅರ್ಜಿ ಸಲ್ಲಿಸಿದಾಗ ಅವರಿಗೆ ಆದ್ಯತೆ ನೀಡಬೇಕೆಂದು ಇರುವ ಸುತ್ತೋಲೆಯನ್ನು ಮಾರ್ಪಡಿಸಿ ಸಹಾಯಕಿಯರ ಹಿತದೃಷ್ಟಿಯಿಂದ ಸರ್ಕಾರಿ ಆದೇಶ ಹೊರಡಿಸಿದರೆ ಮಾತ್ರ ಅವರಿಗೆ ಪ್ರಯೋಜನವಾಗಲಿದ್ದು, ಹಲವಾರು ವರ್ಷಗಳಿಂದ ಸಹಾಯಕಿಯಾಗಿ ಸೇವೆ ಸಲ್ಲಿಸಿದವರಿಗೆ ಕಾರ್ಯಕರ್ತೆಯರ ಹುದ್ದೆ ಖಾಲಿ ಯಾದಲ್ಲಿ ಸಂದರ್ಶನ ಜರುಗಿಸದೇ ನೇಮಕಾತಿ ಮಾಡಲು ಸರ್ಕಾರ ಆದೇಶ ಹೊರಡಿಸಲಾಗುವುದೇ?

ಆ) ಹಾಗಾದಲ್ಲಿ, ಯಾವಾಗ ಹೊರಡಿಸಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಸರ್ಕಾರದ ಆದೇಶ ಹೊರಡಿಸುವ ಅವಶ್ಯಕತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಜಾರಿಗೆ ತಂದಿರುವ ಯಶಸ್ವಿನಿ ವಿಮಾ ಯೋಜನೆ

3185 (3677) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗಾಗಿ ಯಶಸ್ವಿನಿ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆಯೆ

ಆ) ತರಲಾಗಿದ್ದರೆ, ಇಲ್ಲಿಯವರೆಗೂ ಎಷ್ಟು ಜನ ರೈತರು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿರುತ್ತಾರೆ: ಜಿಲ್ಲಾವಾರು ವಿವರ ನೀಡುವುದು:

ಇ) ಈ ಯೋಜನೆಯ ವಿವರಗಳು ಏನು: ಇದರಿಂದ ರೈತರಿಗೆ ಆಗುವ ಪ್ರಯೋಜನವೇನು?

ಈ) ಈ ಯೋಜನೆಗೆ ರಾಜ್ಯ ಸರ್ಕಾರದಿಂದ ನೀಡುತ್ತಿರುವ ಹಣ ಎಷ್ಟು?

ಉ) ಈ ಯೋಜನೆಯಡಿ ಶಸ್ತ್ರ ಚಿಕಿತ್ಸೆಗೊಳಗಾದ ರೈತರ ಸಂಖ್ಯೆ ಎಷ್ಟು: ಇದಕ್ಕಾಗಿ ಖರ್ಚಾಗಿರುವ ಹಣ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಹೌದು

ಆ) 16.01 ಲಕ್ಷ ರೈತರ ಸದಸ್ಯರು ಈ ಯೋಜನೆಯಡಿ ನೋಂದಾಯಿಸಲ್ಪಟ್ಟಿದ್ದಾರೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ.)

ಇ) 1. ಉಚಿತ ಹೊರ ರೋಗಿ ಸಲಹೆ

2. ರಿಯಾಯಿತಿ ದರದಲ್ಲಿ ಪರೀಕ್ಷೆಗಳು